ಪ್ರಧಾನ ನ್ಯಾಯಿಕ ದಂಡಾಧಿಕಾರಿಗಳು, ಗೋಕಾಕ ಇವರ ನ್ಯಾಯಾಲಯ ಸಾಃಗೋಕಾಕ

ಕ್ರಿ. ಮಿ. ನಂಬರಃ **469/2022**

**PW- 1**

| | | |
|---|---|---|
| ಸಾಕ್ಷಿದಾರರ ಹೆಸರು | - | ರೇಣುಕಾ ರಾಮಲಿಂಗಪ್ಪಾ ಉಪ್ಪಾರ |
| ವಯಸ್ಸು | - | 37 ವರ್ಷ |
| ಉದ್ಯೋಗ | - | ಏನು ಇಲ್ಲ |
| ಸಾಕೀನ | - | ಗೋಕಾಕ |

ದಿಃ **02-08-2024** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಮುಖ್ಯ ವಿಚಾರಣೆಃ ಅರ್ಜಿದಾರರ ಪರ ವಕೀಲರಿಂದಃ

1. ಎದುರುದಾರ ನನ್ನ ಗಂಡನಾಗಬೇಕು, ನನ್ನ ಮತ್ತು ಎದುರುದಾರನ ಮದುವೆ ದಿಃ 15-03-2007 ರಂದು ನಮ್ಮ ರೀತಿ ರಿವಾಜು ಪ್ರಕಾರ ಗೋಕಾಕಿನ ಸಮುದಾಯ ಭವನದಲ್ಲಿ ಆಗಿರುತ್ತದೆ. ಸದರಿ ಮದುವೆಯ ಖರ್ಚನ್ನು ನನ್ನ ತಂದೆ ತಾಯಿಗಳು ಮಾಡಿರುತ್ತಾರೆ. ಮದುವೆಯ ಸಮಯದಲ್ಲಿ ನನ್ನ ತಂದೆ ತಾಯಿಗಳು ಎದುರುದಾರನಿಗೆ 11 ತೊಲೆ ಬಂಗಾರ, ಬಟ್ಟೆ ಬರೆ, ಪಾತ್ರೆಯ ಸಾಮಾನುಗಳು, ಫ್ರಿಡ್ಜ, ಪಲ್ಲಂಗ ಹಾಗೂ ಇನ್ನಿತರ ದಿನಬಳಕೆ ವಸ್ತುಗಳನ್ನು ನೀಡಿರುತ್ತಾರೆ. ನನ್ನ ತಂದೆ ತಾಯಿಗಳು ಅಂದಾಜು ರೂ. 10,00,000/- ಖರ್ಚು ಮಾಡಿ ಮದುವೆ ಮಾಡಿಕೊಟ್ಟಿರುತ್ತಾರೆ.

2. ಮದುವೆಯಾದ ನಂತರ ನಾನು ಎದುರುದಾರನೊಂದಿಗೆ ದಾಂಪತ್ಯ ಜೀವನ ಮಾಡಲು ಎದುರುದಾರನ ಮನೆಗೆ ಹೋಗಿರುತ್ತೇನೆ. ಎದುರುದಾರನ ಮನೆಯಲ್ಲಿ ಆತನ ತಂದೆ ತಾಯಿ ಹಾಗೂ ಸಹೋದರಿ ಇದ್ದರು. ನನ್ನ ಮತ್ತು ಎದುರುದಾರನ ದಾಂಪತ್ಯ ಜೀವನದಿಂದ ಅರ್ಜಿದಾರರ 2 ರವರು ದಿಃ 21-01-2009 ರಂದು ಜನಿಸಿರುತ್ತಾನೆ. ತದನಂತರ ಎದುರುದಾರನು ಹೊಸ ಕಾರು ಖರೀದಿ ಮಾಡಬೇಕು ನಿಮ್ಮ ಮನೆಯಿಂದ ರೂ. 10,00,000/- ಹಣ ತರಬೇಕೆಂದು ನನಗೆ ಕಿರಿಕಿರಿ ಕೊಡಲು ಪ್ರಾರಂಭ ಮಾಡಿರುತ್ತಾನೆ. ನಾನು ನನ್ನ ತಂದೆ ತಾಯಿಗಳಿಗೆ ಸದರಿ ವಿಷಯವನ್ನು ತಿಳಿಸಿರುವುದಿಲ್ಲ. ಹೀಗಾಗಿ ಎದುರುದಾರ ನನಗೆ ಮೇಲಿಂದ ಮೇಲೆ ಹಣ ತೆಗೆದುಕೊಂಡು ಬರಬೇಕೆಂದು ಕಿರುಕುಳ ಕೊಟ್ಟಿರುತ್ತಾನೆ. ಹೀಗಾಗಿ ಎದುರುದಾರನ ಹಿಂಸೆಯನ್ನು ತಾಳದೆ ಸದರಿ ಸಂಗತಿಯನ್ನು ನಾನು ನನ್ನ ತಂದೆ ತಾಯಿಗಳಿಗೆ ತಿಳಿಸಿರುತ್ತೇನೆ, ಆಗ ನನ್ನ ತಂದೆ ಊರ ಹಿರಿಯರನ್ನು ಕರೆದುಕೊಂಡು

ಬಂದು ಎದುರುದಾರನಿಗೆ ಬುದ್ದಿವಾದ ಹೇಳಿದರು ಸಹ ಎದುರುದಾರ ಹಿರಿಯರ ಮಾತನ್ನು ಕೇಳಿರುವುದಿಲ್ಲ.

ಕ್ರಿ. ಮಿ. ನಂಬರಃ **469/2022**

3. ಮಾರ್ಚ್ 2017 ರಂದು ಎದುರುದಾರ ನನ್ನನ್ನು ಹಾಗೂ ಅರ್ಜಿದಾರ 2 ರವರನ್ನು ಹೊಡೆಬಡಿ ಮಾಡಿ ಮನೆಯಿಂದ ಹೊರ ಹಾಕಿದ್ದ, ಹೀಗಾಗಿ ನಾನು ಮತ್ತು ಅರ್ಜಿದಾರ 2 ರವರು ನಮ್ಮ ತವರು ಮನೆಗೆ ಬಂದು ನನ್ನ ತವರು ಮನೆಯಲ್ಲಿ ವಾಸವಾಗಿರುತ್ತೇವೆ. ನನ್ನ ತಂದೆ ತಾಯಿಗಳು ಎದುರುದಾರನಿಗೆ ನನ್ನನ್ನು ಹಾಗೂ ನನ್ನ ಮಗನನ್ನು ಚೆನ್ನಾಗಿ ನೋಡಿಕೊಳ್ಳಲು ತಿಳಿಸಿದರು ಸಹ ಯಾವುದೇ ಪ್ರಯೋಜನ ಆಗಿರುವುದಿಲ್ಲ. ನನ್ನ ತಂದೆ ತಾಯಿಗಳು ಎದುರುದಾರನ ಮನೆಗೆ ಹಿರಿಯರನ್ನು ಅನೇಕ ಸಲ ಕರೆದುಕೊಂಡು ಹೋಗಿ ನನ್ನೊಂದಿಗೆ ಚೆನ್ನಾಗಿ ಬಾಳ್ವೆ ಮಾಡಲು ತಿಳಿಸಿದರು ಸಹ ಎದುರುದಾರ ನಮ್ಮನ್ನು ಕರೆದುಕೊಂಡು ತನ್ನ ಮನೆಗೆ ಒಯಿದಿರುವುದಿಲ್ಲ. ಕೊನೆಯದಾಗಿ ನನ್ನ ತಂದೆ ಹಿರಿಯರನ್ನು ಕರೆದುಕೊಂಡು 2022 ರ ಜನೇವರಿ 2 ನೇ ವಾರದಂದು ಎದುರುದಾರನ ಮನೆಗೆ ಹೋಗಿ ನನ್ನನ್ನು ಚೆನ್ನಾಗಿ ನೋಡಿಕೊಳ್ಳಲು ತಿಳಿಸಿರುತ್ತಾರೆ. ಆಗ ಎದುರುದಾರ ನನ್ನೊಂದಿಗೆ ಜೀವನ ನಡೆಸಲು ಆಗುವುದಿಲ್ಲ ಎಂದು ಖಡಾಖಂಡಿತವಾಗಿ ಹೇಳಿರುತ್ತಾನೆ.

4. ಅರ್ಜಿದಾರ 2 ರವರು ಗೋಕಾಕಿನ ಕೆ ಎಲ್ ಇ ಶಾಲೆಯಲ್ಲಿ 10 ನೇ ತರಗತಿ ಓದುತ್ತಿದ್ದಾನೆ. ಆತನಿಗೆ ಪ್ರತಿ ವರ್ಷ ರೂ. 1,50,000/- ಶಾಲಾ ಖರ್ಚು ಇರುತ್ತದೆ. ಅದರಂತೆ ನನಗೆ ಯಾವುದೇ ದುಡಿಯುವ ಶಕ್ತಿ ಇರುವುದಿಲ್ಲ. ಎದುರುದಾರನು ಅರಣ್ಯ ಇಲಾಖೆಯಲ್ಲಿ ರೇಂಜ್ ಫಾರೆಸ್ಟ್ ಆಫೀಸರ್ ಎಂದು ದಾರವಾಡದಲ್ಲಿ ನೌಕರಿ ಮಾಡುತ್ತಿದ್ದು, ಆತನಿಗೆ ಪ್ರತಿ ತಿಂಗಳು 80,000/- ರಷ್ಟು ಸಂಬಳ ಇರುತ್ತದೆ. ಅದರಂತೆ ಎದುರುದಾರನಿಗೆ ಬೆಳಗಾವಿ ತಾಲೂಕಿನ ಅರಳಿಕಟ್ಟಿ ಊರಿನಲ್ಲಿ 8 ಎಕರೆ ನೀರಾವರಿ ಜಮೀನು ಇರುತ್ತದೆ. ಅದರಿಂದ ಪ್ರತಿ ವರ್ಷ ರೂ. 5,00,000/- ದಷ್ಟು ಆದಾಯ ಎದುರುದಾರನಿಗೆ ಇರುತ್ತದೆ. ಅದರಂತೆ ಬೆಳಗಾವಿ ತಾಲೂಕಿನ ಹಿರೇಬಾಗೇವಾಡಿಯಲ್ಲಿ ಎದುರುದಾರನಿಗೆ ಸೇರಿದ 7 ಮನೆಗಳು ಹಾಗೂ 7 ಕಾಂಪ್ಲೆಕ್ಸ್ ಗಳು ಇರುತ್ತವೆ. ಸದರಿ ಮನೆ ಮತ್ತು ಕಾಂಪ್ಲೆಕ್ಸ ಗಳಿಂದ ಪ್ರತಿ ವರ್ಷ ಎದುರುದಾರನಿಗೆ ರೂ. 5,00,000/- ಆದಾಯ ಇರುತ್ತದೆ. ಅದರಂತೆ ಎದುರುದಾರನಿಗೆ ಬೆಳಗಾವಿಯಲ್ಲಿ 2 ಮನೆಗಳು ಇರುತ್ತವೆ. ಸದರಿ 2 ಮನೆಗಳ ಪೈಕಿ 1 ಮನೆಯಲ್ಲಿ ನನ್ನ ಅತ್ತೆ ಮಾವ ವಾಸವಾಗಿರುತ್ತಾರೆ, ಇನ್ನೊಂದು ಮನೆಯನ್ನು ಎದುರುದಾರ ಬಾಡಿಗೆಗೆ ನೀಡಿರುತ್ತಾನೆ. ಅದರಿಂದ ಪ್ರತಿ ವರ್ಷ ಅಂದಾಜು ರೂ. 2,00,000/- ಬಾಡಿಗೆ

ಹಣ ಎದುರುದಾರನಿಗೆ ಬರುತ್ತದೆ. ಹೀಗೆ ಪ್ರತಿ ವರ್ಷ ಎದುರುದಾರನಿಗೆ ಅಂದಾಜು ರೂ. 20,00,000/- ದಷ್ಟು ಆದಾಯವಿರುತ್ತದೆ.

ಕ್ರಿ. ಮಿ. ನಂಬರಃ **469/2022**

5. ನನ್ನ ಗಂಡನ ತಂದೆ ನಿವೃತ್ತ ಪ್ರಾಂಶುಪಾಲರಾಗಿದ್ದು, ಪ್ರತಿ ತಿಂಗಳು ನನ್ನ ಮಾವನಿಗು ಸಾಕಷ್ಟು ಪಿಂಚಣಿ ಹಣ ಬರುತ್ತದೆ. ನನ್ನ ನಾದಿನಿಯಾದ ರೇಣುಕಾ ಉಪ್ಪಾರ ರವರು ಸಹ ನನ್ನ ಮಾವನ ಮನೆಯಲ್ಲಿ ವಾಸವಿದ್ದು, ಅವರು ಸರ್ಕಾರಿ ಪೌಢ ಶಾಲೆಯ ಶಿಕ್ಷಕರಿದ್ದು, ಅವರಿಗೂ ಸಹ ಸಾಕಷ್ಟು ಸಂಬಳ ಬರುತ್ತದೆ.

6. ನನ್ನ ತಂದೆ ತಾಯಿಗಳು ವಯಸ್ಕರಾಗಿದ್ದು, ನನ್ನನ್ನು ಹಾಗೂ ನನ್ನ ಮಗನನ್ನು ನೋಡಿಕೊಳ್ಳುತ್ತಿಲ್ಲ, ಎದುರುದಾರ ನೀಡಿದ ಮಾನಸಿಕ ಮತ್ತು ದೈಹಿಕ ಹಿಂಸೆಯಿಂದ ನನಗೆ ದುಡಿಯುವ ಸಾಮರ್ಥ್ಯ ಇರುವುದಿಲ್ಲ. ನಾನು ನನ್ನ ಮಗನಿಗೆ ಬೇರೆಯವರ ಕಡೆಯಿಂದ ಸಾಲ ಪಡೆದುಕೊಂಡು ಶಾಲೆಯನ್ನು ಕಲಿಸುತ್ತಿದ್ದೇನೆ. ಇಲ್ಲಿಯವರೆಗೆ ನನ್ನ ಗಂಡ ನನಗಾಗಲಿ, ನನ್ನ ಮಗನಿಗಾಗಲಿ ಯಾವುದೇ ಹಣಕಾಸಿನ ಸಹಾಯ ಮಾಡಿರುವುದಿಲ್ಲ. ನಮಗೆ ಬದುಕು ಸಾಗಿಸುವುದು ಕಷ್ಟವಾಗಿರುತ್ತದೆ. ಎದುರುದಾರನು ನಮಗೆ ನಿರ್ಲಕ್ಷ್ಯ ಮಾಡಿರುತ್ತಾನೆ. ಹೀಗಾಗಿ ಅರ್ಜಿಯಲ್ಲಿ ಕೇಳಿದಂತೆ ಜೀವನಾಂಶ ಕೊಡಿಸಲು ಪ್ರಾರ್ಥನೆ.

ಮುಂದುವರೆದ ಮುಖ್ಯ ವಿಚಾರಣೆಗೆ ಸಮಯಾವಕಾಶ ಕೋರಿದ್ದು ನೀಡಲಾಯಿತು.

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೆ. ಕೇ. ಸರಿ ಇದೆ,

(ರಾಜೀವ ಗೋಳಸಾರ)
ಪ್ರ.ದಿ.&ನ್ಯಾದಂ., ಗೋಕಾಕ.